VIJAYAKUMAR KANNUR Digitally signed by VIJAYAKUMAR KANNUR Date: 2026.04.09 07:57:23 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 08.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ದೂರುದಾರ ಪರ ಕು. ಎಸ್ ಎಸ್ ಡಿ ವಕೀಲರಿಂದ :</u>**

ದೂರುದಾರನ ಪರಿಚಯ ನನಗೆ ಇರುವುದು. ದೂರುದಾರ ಮುಧೋಳ ಪಟ್ಟಣದ ಸೈದಾಪೂರ ಗಲ್ಲಿಯಲ್ಲಿ ವಾಸವಾಗಿರುವರು ಎಂದರೆ ನನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸುವರು. ನಾನು ಮಲ್ಲಮನಗರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಿಂದಲೂ ಬಾಂಡೆ ವ್ಯಾಪಾರ ಹಳ್ಳಿ ಹಳ್ಳಿಗೆ ಹೋಗಿ ಮಾರಾಟ ಮಾಡುತ್ತಿರುವೆನು ಎಂದರೆ ಸರಿ. ಈ ಬಾಂಡೆ ವ್ಯಾಪಾರದಿಂದ ಬಂದ ಹಣದಿಂದ ನಮ್ಮ ಉಪಜೀವನ ನಡೆಸಿಕೊಂಡು ಹೋಗಲು ಕಷ್ಟಕರವಾಗುತ್ತದೆ ಎಂದರೆ ಸರಿ. ಈ ಕಾರಣಕ್ಕಾಗಿ ನಾನು ದೂರುದಾರನ ಕಡೆಯಿಂದ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು ರುದ್ರಯ್ಯ ಹೀರೆಮಠ ಕಡೆಯಿಂದ ಈ ಹಣ ಪಡೆದುಕೊಂಡು 3 ತಿಂಗಳಲ್ಲಿ ಮರಳಿ ನೀಡುವುದಾಗಿ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ, ಆ ಹಣ ಆತನಿಗೆ ಮರಳಿ ನೀಡಿರುವುದಾಗಿ ಎಂದು ಉತ್ತರಿಸುವರು. ನಾನು 3 ತಿಂಗಳ ಅವಧಿಯಲ್ಲಿ ಹಣ ಮರಳಿ ನೀಡದೆ ಇದ್ದಾಗ ಅವರಿಗೆ ನಿಪಿ 1 ರ ಚೆಕ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ನ್ನು ನಾನು ರೂ. 20 ಸಾವಿರ ಹಣದ ಭದ್ರತೆಗಾಗಿ ದೂರುದಾರನಿಗೆ ನೀಡಿರುವೆನು. ಈ ರೂ. 20 ಸಾವಿರ ಹಣ ದೂರುದಾರನ ಕಡೆಯಿಂದ ಪಡೆದ ದಿನಾಂಕ, ವರ್ಷ ನನಗೆ ನೆನಪಿರುವುದಿಲ್ಲ.

2. ಈ ಚೆಕ್ ಅಮಾನ್ಯಗೊಂಡ ನಂತರ ನಿಪಿ 3 ರಂತೆ ನನಗೆ ದೂರುದಾರ ನೋಟಿಸು ಕಳುಹಿಸಿಕೊಟ್ಟಿರುವನು ಎಂದರೆ ಸರಿಯಲ್ಲ. ನನಗೆ ಯಾವುದೇ ನೋಟಿಸು ಜಾರಿಯಾಗಿರುವುದಿಲ್ಲ, ಆ ಕಾರಣಕ್ಕೆ ಉತ್ತರವನ್ನು ಕೊಟ್ಟಿರುವುದಿಲ್ಲ. ನಿಪಿ 5 ರ ಪ್ರಕಾರ ನಾನು ನೋಟಿಸು ಸ್ವೀಕರಿಸಿದ್ದರೂ ಸಹಿತ ನಾನು ಸ್ವೀಕರಿಸಿರುವುದಿಲ್ಲ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನೋಟಿಸಿನಲ್ಲಿ ಬರೆದಿರುವ ಸಂಗತಿಗಳು ನಿಜವಿರುವುದರಿಂದ ಆ ಕಾರಣಕ್ಕೆ ನಾನು ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರನಿಗೆ ನಾನು ಪಡೆದಿರುವ ಹಣ ಬಡ್ಡಿಸಮೇತ ಒಟ್ಟು ರೂ. 30 ಸಾವಿರ ಹಣವನ್ನು ಮರಳಿ ಯಾವ ತಿಂಗಳು, ಯಾವ ದಿನಾಂಕ, ವರ್ಷ ನೀಡಿರುವೆನು ಎಂದು ನನಗೆ ನೆನಪಿರುವುದಿಲ್ಲ. ನಾನು ರೂ. 30 ಸಾವಿರವನ್ನು ದೂರುದಾರನಿಗೆ ಯಲ್ಲಪ್ಪ ಇಂಗಳೆ ಇತನ ಸಮಕ್ಷಮದಲ್ಲಿ ನೀಡಿರುವೆನು. ಈ ಸಂಗತಿ ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ನಗದು ರೂಪದಲ್ಲೇ ರೂ. 30 ಸಾವಿರ ಹಣವನ್ನು ನಾನು ದೂರುದಾರನಿಗೆ ನೀಡಿರುವೆನು. ಈ ಹಣ ನೀಡಿದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

3. ನಾನು ಶಾಲೆ ಕಲಿತಿರುವುದಿಲ್ಲ. ನನಗೆ ಕನ್ನಡ ಭಾಷೆ ಓದಲು , ಬರೆಯಲು ಸಹ ಬರುವುದಿಲ್ಲ. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರ ಮತ್ತು ನನ್ನ ಮಧ್ಯೆ ಹಣಕಾಸಿನ ವ್ಯವಹಾರವಾಗಿದ್ದು ಆ ಹಣವನ್ನು ನಾನು ದೂರುದಾರನಿಗೆ ಮರಳಿ ನೀಡಿರುವೆನು. ನಾನು ದೂರುದಾರನ ಕಡೆಯಿಂದ ಪಡೆದುಕೊಂಡಿರುವ ಹಣ ಮರಳಿ ನೀಡಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ನ್ನು ಮರಳಿ ನೀಡುವಂತೆ ದೂರುದಾರನಿಗೆ ಕೇಳಿರುವೆನು, ಆದರೆ ಆತ ಮರಳಿ ನೀಡಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ದೂರುದಾರನ ವಿರುದ್ದ ನಾನು ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದಿಲ್ಲ. ನಾನು ದೂರುದಾರನಿಗೆ ರೂ. 30 ಸಾವಿರ ಹಣ ನೀಡಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರನಿಗೆ ರೂ. 1 ಲಕ್ಷ 50 ಸಾವಿರ ಹಣ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ದೂರುದಾರನನ್ನು ಹೊರತು ಪಡಿಸಿ ಬೇರೆಯಾರ ಕಡೆ ಸಾಲ ಪಡೆದುಕೊಂಡಿರುವುದಿಲ್ಲ. ನನ್ನ ವಿರುದ್ದ ಎರಡು ಚೆಕ್ ಬೌನ್ಸ ಪ್ರಕರಣಗಳು ದಾಖಲಾಗಿರುವವು. ಹೊಳೆಪ್ಪ ರೂಗಿ ಇತನ ಕಡೆಯಿಂದ ಹಣ ಪಡೆದುಕೊಂಡಿದ್ದು ಅದನ್ನು ನಾನು ಮರಳಿ ನೀಡಿರುವೆನು. ಇತನು ಸಹ ನನ್ನ ವಿರುದ್ದ ಚೆಕ್ ಬೌನ್ಸ ಪ್ರಕರಣ ದಾಖಲು

ಮಾಡಿರುವವನು ಎಂದರೆ ಸರಿ. ಅದು ವಿಚಾರಣೆಯ ಹಂತದಲ್ಲಿ ಇರುವುದು ಎಂದರೆ ಸರಿ. ನಾನು ಉದ್ದೇಶಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ